ಹೇಳಲಿ. "ಉದ್ಭವಿಸುವುದಿಲ್ಲ" ಎಂದು ಉತ್ತರವನ್ನು ಕೊಟ್ಟರೆ ನಾವೇನು ಮಾಡಬೇಕು. ತರೀಕೆರೆ ತಾಲ್ಲೂಕಿನಲ್ಲಿ ಅನೇಕ ಕಡೆ ಸರ್ಕಾರಿ ಕಟ್ಟಡ ಕಟ್ಟಲು ಜಾಗ ಕೊಟ್ಟಿದ್ದೇವೆ. ಆದರೂ, ಇವರು ಹಣ ಇಲ್ಲ, ಅಥವಾ ಮುಂದಿನ ವರ್ಷ ಕೊಡುತ್ತೇವೆ ಅಥವಾ ಕೊಡಲಿಕ್ಕಾಗುತ್ತಾ ಇಲ್ಲ ಎಂದು ಹೇಳುತ್ತಾ ಇಲ್ಲ. ಇಷ್ಟು ಕಟ್ಟಡ ಕಟ್ಟಿದ್ದೇವೆ ಎಂಬುದನ್ನು ಆದರೂ ಹೇಳಬೇಕಲ್ಲವೇ?

ಶ್ರೀ ಖಮರುಲ್ ಇಸ್ಲಾಂ : ಅದರ ಬಗ್ಗೆ ಪರಿಶೀಲಿಸುತ್ತೇನೆ.

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ : ಬೈಲಹೊಂಗಲ ತಾಲ್ಲೂಕಿನ ದೊಡ್ಡವಾಡ ಗ್ರಾಮಕ್ಕೆ ಐ.ಟಿ.ಐ ಕಾಲೇಜನ್ನು ಕೊಡುತ್ತಾರೆಯೋ ಇಲ್ಲವೋ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

Sri Qamarul Islam : If there is a viability definitely it will be considered, I have already requested the Government for separate budget of starting of the I.T.Is. After the sanction of the budget, I will look into the viability of the 18 proposals.

ಶ್ರೀ ಶಿವಾನಂದ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ನೀಲಕಂಠಪ್ಪನವರು ಕೇಳಿದ ಪ್ರಶ್ನೆ ಬಹಳ ಸೂಕ್ತ ಇದೆ. ಏಕೆಂದರೆ, 7–8 ವರ್ಷಗಳಿಂದ ಕೆಲವು ಐ.ಟಿ.ಐಗಳಿಗೆ ಕಟ್ಟಡಗಳೇ ಇಲ್ಲ. ವಿವಿಧ ಫ್ಯಾಕಲ್ಟೀಸ್ ಪ್ರಾರಂಭ ಮಾಡುವುದಕ್ಕೂ ತಾವು ಅನುಮತಿ ಕೊಡುತ್ತಾ ಇಲ್ಲ. ಇವತ್ತಿನ ದಿವಸ ನೂರಾರು ಐ.ಟಿ.ಐಗಳನ್ನು ಕಟ್ಟಡಗಳು ಇಲ್ಲದೇ ಬೇರೆ ಬೇರೆ ಸ್ಥಳಗಳಲ್ಲಿ ನಡೆಸುತ್ತಾ ಇದ್ದಾರೆ. ಅವರಿಗೆ ಎಂತಹ ಪರಿಸ್ಥಿತಿ ಒದಗಿ ಬಂದಿದೆಯೆಂದರೆ, ಕೊಟ್ಟವರು ಕೂಡ ಅವರನ್ನು ಬಿಡಿಸಲಿಕ್ಕೆ ನಿಂತಿದ್ದಾರೆ. ಉದಾಹರಣೆಗೆ ನನ್ನ ತಾಲ್ಲೂಕಿನಲ್ಲಿ ಬಬಲೇಶ್ವರ ಗ್ರಾಮದಲ್ಲಿ 7 ವರ್ಷಗಳಿಂದ ಈ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದೇವೆ. ಅದಕ್ಕಾಗಿ ನೀವು ಪ್ರತಿ ವರ್ಷ ಎಷ್ಟು ಹೊಸ ಐ.ಟಿ.ಐ ಕಟ್ಟಡಗಳನ್ನು ನಿರ್ಮಾಣ ಮಾಡುತ್ತೀರಿ ಎಂಬುದನ್ನು ಏನಾದರೂ ಒಂದು ಅಂಕಿ ಸಂಖ್ಯೆ ಹೇಳಬೇಕು. ನೀವು ಇದರ ಬಗ್ಗೆ ಸ್ಪೆಸಿಫಿಕ್ ಉತ್ತರ ಕೊಟ್ಟರೆ ಒಳ್ಳೆಯದಾಗುತ್ತದೆ. ಪರಿಶೀಲಿಸುತ್ತೇವೆ, ಉದ್ಭವಿಸುವುದಿಲ್ಲವೆಂದರೆ ಅದು ಉತ್ತರ ಆಗುವುದಿಲ್ಲ.

ಶ್ರೀ ಖಮರುಲ್ ಇಸ್ಲಾಂ : ನೀವು ಪ್ರತ್ಯೇಕ ಪ್ರಶ್ನೆ ಕೇಳಿ, ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಸೋಮಶೇಖರ್ ಅವರೇ, ತಮ್ಮ ಪ್ರಶ್ನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾಯಿಸಲಾಗಿದೆ ಎಂದಿದೆ. ನಮಗೆ ಇನ್ನೂ 3–4 ವಾರ ಕಾಲಾವಕಾಶ ಇದೆ. ಆದ್ದರಿಂದ, ನಿಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ ಬಿ. ಸೋಮಶೇಖರ್ : ಈ ವಾರದಲ್ಲಿ ರೂರಲ್ ಡೆವಲಪ್‌ಮೆಂಟ್ ಸಬ್ಜೆಕ್ಟ್ ಯಾವುದಿದೆ? ನಾಳೆ ಇದೆಯಲ್ಲ, ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು : ಉತ್ತರ ಬಂದರೆ, ನಾಳೆಯೇ ತೆಗೆದುಕೊಳ್ಳೋಣ.

ಮಂಡ್ಯದ ಎ.ಡಿ.ಎಲ್.ಆರ್. ಕಛೇರಿಯಲ್ಲಿ ರೈತರ ಜಮೀನಿನ ಅಳತೆ ಪ್ರಕ್ರಿಯೆ ವಿಳಂಬವಾಗುತ್ತಿರುವ ಬಗ್ಗೆ

3115 (349) : **ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ)** : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಎ.ಡಿ.ಎಲ್.ಆರ್. ಕಛೇರಿಯಲ್ಲಿ ತಮ್ಮ ಜಮೀನಿನ ಅಳತೆ ಹಾಗೂ ಹದ್ದುಬಸ್ತು ಗೊತ್ತುಪಡಿಸಲು ರೈತರು ಸಲ್ಲಿಸಿರುವ ಅರ್ಜಿಗಳ ಸಂಖ್ಯೆಯಷ್ಟು;

ಆ) ಇವುಗಳಲ್ಲಿ ವಿಲೇವಾರಿ ಮಾಡಿರುವ ಅರ್ಜಿಗಳೆಷ್ಟು;

ಇ) ರೈತರ ಜಮೀನಿನ ಅಳತೆ ಮಾಡುವ ಹಾಗೂ ಹದ್ದುಬಸ್ತು ನಿಗಧಿಪಡಿಸುವ ಪ್ರಕ್ರಿಯೆ ತೀವ್ರ ವಿಳಂಬವಾಗುತ್ತಾ ಇರಲು ಕಾರಣಗಳೇನು;

ಈ) ಈ ವಿಳಂಬ ಪ್ರಕ್ರಿಯೆಯ ಸಮಸ್ಯೆಯನ್ನು ನಿವಾರಿಸಲು ಸರ್ಕಾರವು ಯಾವ ಕ್ರಮ ಕೈಗೊಳ್ಳುವುದು:

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ದಿನಾಂಕ: 1.4.2002 ರಿಂದ 30.6.2003ರವರೆಗೆ ಜಮೀನಿನ ಅಳತೆ ಮಾಡಿ ಹದ್ದುಬಸ್ತು ಗೊತ್ತುಪಡಿಸಲು 717 ಅರ್ಜಿಗಳು ಬಂದಿರುತ್ತದೆ.

ಆ) ಇವುಗಳಲ್ಲಿ 296 ಅರ್ಜಿಗಳನ್ನು ವಿಲೇ ಮಾಡಲಾಗಿದೆ.

ಇ) ಮಂಡ್ಯ ಉಪವಿಭಾಗದ ಹೆಚ್ಚಿನ ಪ್ರದೇಶಗಳು ನೀರಾವರಿ ಕೃಷಿ ಬೆಳೆಯಿಂದ ಕೂಡಿರುವುದರಿಂದ ಅರ್ಜಿದಾರರ ಹಾಗೂ ಬಾಜೂದಾರರ ಜಮೀನಿನಲ್ಲಿ ಬೆಳೆಯಿದ್ದರೆ ಸದರೀ ಬೆಳೆ ಕಟಾವು ಆಗುವವರೆಗೆ ಕಾಯಬೇಕಾಗುತ್ತದೆ. ಹಾಗೂ ಕೆಲವು ಮೂಲ ದಾಖಲೆಗಳು ಶಿಥಿಲವಾಗಿರುವುದರಿಂದ ನೀರಾವರಿ ಪ್ರದೇಶದಲ್ಲಿ ಬಾಂದು ಗುರುತುಗಳು ನಾಶವಾಗಿರುವುದರಿಂದ ಕೆಲವು ಸಂದರ್ಭದಲ್ಲಿ ವಿಳಂಬಕ್ಕೆ ಅವಕಾಶವಾಗಿರುತ್ತದೆ. ಆದರೆ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಲ್ಲಿ ಹೆಚ್ಚಿನ ವಿಳಂಬಕ್ಕೆ ಅವಕಾಶವಿರುವುದಿಲ್ಲ.

ಈ) ಈ ವಿಳಂಬ ಪ್ರಕ್ರಿಯೆಯ ಸಮಸ್ಯೆಯನ್ನು ನಿವಾರಿಸಲು ಪ್ರತಿ ಸಿಬ್ಬಂದಿಗೆ ಹೆಚ್ಚಿನ ಗುರಿ ನೀಡಿ ಬಾಕಿ ಇರುವ ಪ್ರಕರಣಗಳನ್ನು ತೀವ್ರವಾಗಿ ಇತ್ಯರ್ಥಗೊಳಿಸಲು ಸೂಚಿಸಲಾಗಿದೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೇ, ಸುಮಾರು 14 ತಿಂಗಳ ಕಾಲದಲ್ಲಿ ಬಂದಿರತಕ್ಕ 700 ಅರ್ಜಿಗಳಲ್ಲಿ 296 ಅರ್ಜಿಗಳನ್ನು ಮಾತ್ರ ವಿಲೇ ಮಾಡಿದ್ದಾರೆ. ಉಳಿಕೆ ಅರ್ಜಿಗಳನ್ನು ನಿಗದಿತ ಅವಧಿಯಲ್ಲಿ ನಿರ್ದಿಷ್ಟವಾಗಿ ಕಾಲಮಿತಿ ಗೊತ್ತು ಮಾಡಿ, ಅರ್ಜಿಗಳನ್ನು ವಿಲೇವಾರಿ ಮಾಡಲಿಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ? ಮೂಲ ದಾಖಲಾತಿಗಳು ಶಿಥಿಲವಾಗಿದೆ ಎಂದು ಅವರ ಉತ್ತರದಲ್ಲಿ ತಿಳಿಸಿದ್ದಾರೆ. ವಸ್ತುಸ್ಥಿತಿ ಆ ಮೂಲ ದಾಖಲೆಗಳನ್ನು ರೀ–ರೈಟ್ ಮಾಡಿದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳು ದೃಢೀಕರಣ ಮಾಡದೇ ರೈತರು ಕಛೇರಿಗಳನ್ನು ಅಲೆದು, ಅಲೆದು ಸುಸ್ತಾಗಿ ಪ್ರತಿಭಟನೆ ಮಾಡತಕ್ಕ ಹಂತಕ್ಕೆ ತಲುಪಿರತಕ್ಕ ಹಿನ್ನೆಲೆಯಲ್ಲಿ ಈ ರೀ ರೈಟ್ ಮಾಡಿರತಕ್ಕ ದಾಖಲೆಗಳನ್ನು ದೃಢೀಕರಣ ಮಾಡುತ್ತಾರೆಯೇ ಎಂದು ಕೇಳುತ್ತೇನೆ. ಸಿಬ್ಬಂದಿಗೆ ಹೆಚ್ಚಿನ ಗುರಿ ನೀಡುತ್ತೇವೆ ಎಂಬ ವಿಚಾರವನ್ನು ಅವರು ತಿಳಿಸಿದ್ದಾರೆ. ಹಾಲಿ ಇರತಕ್ಕ ಸಿಬ್ಬಂದಿಗೆ ಏಕೆ ಗುರಿಯನ್ನು ನೀಡಲಿಲ್ಲ ಎಂಬುದನ್ನು ಅವರಲ್ಲಿ ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಅಧ್ಯಕ್ಷರೇ, ಸುಮಾರು ಇನ್ನೂ 400 ಅರ್ಜಿಗಳನ್ನು ವಿಲೇವಾರಿ ಮಾಡತಕ್ಕ ಅವಶ್ಯಕತೆ ಇದೆ. ಆದಷ್ಟು ತೀವ್ರಗತಿಯಲ್ಲಿ ಅಧಿಕಾರಿಗಳಿಗೆ ಸೂಚನೆ ಕೊಟ್ಟು ವಿಲೇವಾರಿ ಮಾಡಿಸಿಕೊಡುತ್ತೇನೆ. ಇನ್ನೊಂದು ಕೆಲವು ಮೂಲದಾಖಲೆಗಳು ಬಹಳಷ್ಟು ಶಿಥಿಲವಾಗಿದೆ ಎಂಬುದು ಇಲಾಖೆಯ ಗಮನಕ್ಕೆ ಬಂದಿದೆ. ಈಗಾಗಲೇ [illegible]

ರೂ.ಗಳನ್ನು ಕೇಳಿದ್ದೇವೆ. ಹಣ ಬಂದಕೂಡಲೇ ಈ ಶಿಥಿಲವಾದ ದಾಖಲೆಗಳನ್ನೂ ರೀ–ರೈಟ್ ಮಾಡಿಕೊಡುತ್ತೇವೆ. ಇನ್ನು ಸಾಕಷ್ಟು ಸರ್ವೇಯರ್ ಹುದ್ದೆಗಳು ವೇಕೆಂಟ್ ಇದೆ ಎಂದು ಹೇಳಿದರು. ನಾವು ಹಣಕಾಸಿನ ಸಚಿವರನ್ನೂ ಭೇಟಿಯಾಗಿ ಕೇಳಿದ್ದೇವೆ. ಅವರು ಹಣಕಾಸು ಕೊಡುವ ಒಪ್ಪಿಗೆ ಕೊಟ್ಟಮೇಲೆ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ : ಸರ್ವೇಯರ್‌ಗಳ ಕೊರತೆ ಬಹಳ ಇದೆ. ಮೂಲಭೂತವಾಗಿ ನಮ್ಮದು ಕೃಷಿ ಪ್ರದೇಶ. ಪ್ರತಿ ದಿವಸವೂ ಕೂಡ ಜಮೀನುಗಳ ಬಗ್ಗೆ ವ್ಯಾಜ್ಯ ಇರುತ್ತದೆ. ಯಾವುದೋ ಒಂದು ಜಗಳ ಇರತಕ್ಕ ಹಿನ್ನೆಲೆಯಲ್ಲಿ, ದಾಯಾದಿ ಮತ್ಸರ ಜಾಸ್ತಿಯಾಗುತ್ತದೆ. ಶೀಘ್ರವಾಗಿ ಆ ಹುದ್ದೆಗಳನ್ನು ತುಂಬಿ, ನಮಗೆ ಸಾಕಷ್ಟು ಸರ್ವೇಯರ್‌ಗಳನ್ನು ಕೊಟ್ಟು ನಮ್ಮಲ್ಲಿರತಕ್ಕ ಅರ್ಜಿಗಳನ್ನು ವಿಲೇವಾರಿ ಮಾಡತಕ್ಕ ಪ್ರಕ್ರಿಯೆಯನ್ನು ಸರ್ಕಾರ ಮಾಡಬೇಕು. ರೈತರು ವರ್ಷಾನುಗಟ್ಟಲೆ ಅಳತೆ ಮಾಡಿಸುವುದಕ್ಕೆ ಕಾಯತಕ್ಕ ಪರಿಸ್ಥಿತಿ ಉದ್ಭವವಾಗಿದೆ. ನಾವು, ಎಷ್ಟೇ ಶಿಫಾರಸ್ಸು ಮಾಡಿ ಪ್ರಯತ್ನಪಟ್ಟರೂ ಕೂಡ, ಅದು ಆಗುತ್ತಾ ಇಲ್ಲ. ರೈತರಿಗೆ ಉತ್ತರ ಕೊಡತಕ್ಕ ಸ್ಥಿತಿಯಲ್ಲಿ ನಾವಿಲ್ಲ. ದಯಮಾಡಿ, ಸರ್ಕಾರ ಇದಕ್ಕೆ ಆದ್ಯತೆಯನ್ನು ನೀಡಿ ಸರ್ವೇಯರ್‌ಗಳನ್ನು ಭರ್ತಿ ಮಾಡತಕ್ಕ ಕಾರ್ಯ ಅಥವಾ ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ : ಸರ್ವೆ ವಿಚಾರದಲ್ಲಿ ಸುಮಾರು ಹತ್ತಾರು ವರ್ಷಗಳಿಂದ ಈ ಸರ್ವೆ ಕಾರ್ಯ ಸರಿಯಾಗಿ ಆಗುತ್ತಾ ಇಲ್ಲ. ಕಾರಣ ಏನೆಂದರೆ, ಸಿಬ್ಬಂದಿ ಕೊರತೆ. ಒಂದೊಂದು ತಾಲ್ಲೂಕಿನಲ್ಲಿ ಒಬ್ಬರೋ ಇಬ್ಬರೋ ಸರ್ವೇಯರ್ ಇದ್ದಾರೆ. ವರ್ಷ ವರ್ಷ ಲಕ್ಷಾಂತರ ಪೋಡಿ ಕೇಸುಗಳು ಹೋಗುತ್ತಾ ಇವೆ. ಆ ದೃಷ್ಟಿಯಿಂದಲೇ ನಮ್ಮ ಸರ್ಕಾರ ಇದ್ದಾಗ ಈ ಲ್ಯಾಂಡ್ ರೆವಿನ್ಯೂ ಕಾನೂನಿಗೆ ಬಂದು ತಿದ್ದುಪಡಿ ತಂದೆವು. ಈ ಖಾಸಗೀ ಅಂದರೆ ಲೈಸೆನ್ಸ್ ಸರ್ವೇಯರ್ಸ್‌ಗೆ ಕೊಡತಕ್ಕದ್ದು.

12.10 ಪಿಎಂ

ಮತ್ತೆ ಇನ್ನು ಮುಂದೆ ಪೋಡಿ ಕೇಸ್‌ಗಳು ಬರಬಾರದು. ರಿಜಿಸ್ಟೆಷನ್ ಆಗುವುದಕ್ಕೆ ಮೊದಲೇ ಸರ್ವೇ ಸ್ಕೆಚ್ ಮಾಡಿ, ಸಬ್‌ರಿಜಿಸ್ಟಾರ್ ಕಚೇರಿಗೆ ಕೊಡಬೇಕು. ನಿಖರವಾದಂಥ ಅಳತೆಗೆ ರಿಜಿಸ್ಟೆಷನ್ ಆಗಬೇಕು. ಹಾಗೆ ಮಾಡಿ ಮುಂದೆ ಪೋಡಿ ಕೇಸ್‌ಗಳು ಬರಬಾರದು ಎಂಬ ಮಹತ್ವವಾದಂಥ ಹಾಗೂ ಐತಿಹಾಸಿಕವಾದಂಥ ತೀರ್ಮಾನವನ್ನು ನಾವುಗಳು ತೆಗೆದುಕೊಂಡಿದ್ದೆವು. ಲೈಸನ್ಸ್‌ಡ್ ಸರ್ವೇಯರ್‌ಗಳಿಗೆ ಟ್ರೈನಿಂಗ್ ಕೊಟ್ಟು ಅಂತವರು ಸಾವಿರಾರು ಜನರಿದ್ದಾರೆ. ಆದರೆ ಈ ಬಗ್ಗೆ ಸರಕಾರದವರು ಸರಿಯಾದ ಗಮನಹರಿಸಿಲ್ಲ. ಕಳೆದ ಅಧಿವೇಶನದಲ್ಲಿ ಮಾನ್ಯ ಕಂದಾಯ ಸಚಿವರಿಗೆ ನಾನು ಹೇಳಿದ್ದೇನೆ. ಕೆಲವು ಅಧಿಕಾರಿಗಳು ನಿಮ್ಮನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆಂದು ಹೇಳಿದ್ದೇನೆ. ತಾವುಗಳು ಹಿರಿಯ ಮಂತ್ರಿಗಳಾಗಿದ್ದೀರಿ. ಈ ವಿಷಯವನ್ನು ಚರ್ಚಿಸಲು ತಾವು ಒಂದು ಸಭೆಯನ್ನು ಕರೆಯಿರಿ, ನಾನೂ ಬರುತ್ತೇನೆ. ನಿಮ್ಮ ಅಧಿಕಾರಿಗಳನ್ನೂ ಕರೆಯಿರಿ. ಈ ಕುರಿತು ಯಾವ ತೊಂದರೆಗಳಿವೆ ಎಂದು ಪರಿಶೀಲಿಸೋಣ. ಇದರ ಕುರಿತಾಗಿ ಚರ್ಚೆಮಾಡೋಣ. ನಾನು ನಿಮಗೆ ಕನ್‌ವಿನ್ಸ್ ಮಾಡುತ್ತೇನೆ, ನೀವು ನನಗೆ ಕನ್‌ವಿನ್ಸ್ ಮಾಡಿ. ನಾವುಗಳು ಇದನ್ನು ತಂದಿರತಕ್ಕಂಥಾದ್ದರಿಂದ ಸಾರ್ವಜನಿಕರಿಗೆ ಒಳಿತಾಗಿದೆಯೋ, ಇಲ್ಲವೋ, ಎಂಬುದನ್ನು ಹೇಳಬೇಕು. ಈ ಸಭೆಯನ್ನು ಕರೆಯುವ ಬಗ್ಗೆ ತಾವುಗಳು ಆಶ್ವಾಸನೆಯನ್ನು ಕೊಡಬೇಕು ಎಂಬ ಬಗ್ಗೆ ನಾನು ತಮ್ಮನ್ನು ಆಗ್ರಹಪಡಿಸುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ವಿರೋಧ ಪಕ್ಷದ ನಾಯಕರು ಹಿಂದೆ ಕೊಟ್ಟ ಸಲಹೆಯ ಮೇರೆಗೆ ಸುಮಾರು ಮೂರು ಸಾವಿರ ಜನ ಸರ್ವೇಯರ್‌ಗಳಿಗೆ ಟ್ರೈನಿಂಗ್ ಕೊಟ್ಟು

ಎಲ್ಲಾ ಕಡೆಗಳಲ್ಲಿ ಅಪಾಯಿಂಟ್ ಮಾಡಿದ್ದೆವು. ಅದನ್ನು ಅನುಷ್ಠಾನಕ್ಕೆ ತರುವಾಗ, ಏನಾಯಿತೆಂದರೆ, ಸ್ಕೆಚ್‌ಮಾಡುವಾಗ ನಾನಾರೀತಿಯಾದ ಅವ್ಯವಹಾರಗಳನ್ನು ಮಾಡಿ, ದೊಡ್ಡ ಗಲಾಟೆಯಾಯಿತು. ಶಾಸಕರು ಮತ್ತು ಸಾರ್ವಜನಿಕರು ಈ ಕುರಿತು ತಮ್ಮ ವಾದವನ್ನು ಹೇಳಿದರು. ಸಬ್‌ರಿಜಿಸ್ಟ್ರಾರ್ ಆಫೀಸ್‌ನಲ್ಲಿ ರಿಜಿಸ್ಟ್ರೇಶನ್ ಕಡಿಮೆಯಾಯಿತು. ಹಾಗಾಗಿ ಆಗತಕ್ಕಂಥಾದ್ದನ್ನು ತಕ್ಷಣ ಸ್ಥಗಿತ ಮಾಡಿ ಹಾಗೆಯೇ ನಿಲ್ಲಿಸಿದ್ದೇವೆ.

ಶ್ರೀ ಬಿ. ಸೋಮಶೇಖರ್ : ಆ ರೀತಿಯ ಗಲಾಟೆಯನ್ನು ಸೃಷ್ಟಿ ಮಾಡಿದವರು ಯಾರು? ಅದನ್ನು ಯಾವ ಉದ್ದೇಶದಿಂದ ಮಾಡಿದ್ದಾರೆ? ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಂದ ಈ ಒಂದು ಐತಿಹಾಸಿಕವಾದಂಥ, ಜನಪರವಾದಂಥ, ಕಾರ್ಯಕ್ರಮವನ್ನು ನಿಲ್ಲಿಸುವ ಪ್ರಯತ್ನ ನಡೆಯಿತು. ಈಗ ತಾವುಗಳು ಈ ಕುರಿತಾಗಿ ಕೂಲಂಕಷವಾಗಿ ಚರ್ಚಿಸಲು ಒಂದು ಸಭೆಯನ್ನು ಕೂಡಲೇ ಕರೆಯಿರಿ. ಸಂಬಂಧಪಟ್ಟವರೆಲ್ಲರನ್ನು ಕರೆಸಿರಿ, ನಿಮ್ಮ ಸೆಕ್ರೆಟರಿಯವರನ್ನೂ ಕರೆಸಿರಿ, ನಾನೂ ಬರುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಸಭೆ ಕರೆಯೋಣ. ಇವೊತ್ತು ಆ ಮೂರು ಸಾವಿರ ಜನರು ಯಾರಿದ್ದಾರೆ ಅವರುಗಳು ಕಂಪ್ಲೀಟ್ ಆಗಿ ನಿರುದ್ಯೋಗಿಗಳಾಗಿದ್ದಾರೆ. ದೊಡ್ಡ ಗಲಟೆಯಾಗಿ ಹೋಯಿತು. ರಾಜ್ಯದಲ್ಲಿ ರಿಜಿಸ್ಟ್ರೇಶನ್ ಕಡಿಮೆಯಾಯಿತು. ಸ್ಕೆಚಿಂಗ್ ಮಾಡತಕ್ಕಂಥ ಸಂದರ್ಭದಲ್ಲಿ ಸ್ಕೆಚ್‌ಗಳನ್ನು ಬದಲಾಯಿಸಿ.

ಶ್ರೀ ಬಿ. ಸೋಮಶೇಖರ್ : ಸ್ವಾಮಿ, ನಾನು ನಿಮಗೆ ಕನ್‌ವಿನ್ಸ್ ಮಾಡುತ್ತೇನೆ. ಇಲ್ಲವಾದಲ್ಲಿ ನೀವು ನನ್ನನ್ನು ಕನ್‌ವಿನ್ಸ್ ಮಾಡಿ. ಒಟ್ಟಿನಲ್ಲಿ ನಮ್ಮ ನಿಮ್ಮ ಉದ್ದೇಶವು ಸಾರ್ವಜನಿಕರಿಗೆ ಒಳ್ಳೆಯದಾಗಲಿ ಎಂಬುದಾಗಿದೆಯಲ್ಲವೇ? ಸಭೆಯನ್ನು ಯಾವೊತ್ತು ಕರೆಯುತ್ತೀರಿ ಎಂಬುದನ್ನು ಹೇಳಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಸಭೆಯನ್ನು ಕರೆಯೋಣ. ಅದರ ದಿನಾಂಕವನ್ನು ನಾನು ತಮಗೆ ತಿಳಿಸುತ್ತೇನೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಸ್ಕೆಚ್ ಆದಮೇಲೆ ರಿಜಿಸ್ಟ್ರೇಶನ್ ಮಾಡಬೇಕೆಂದು ಹೇಳಿದ್ದಾರೆ. ಆ ಪದ್ಧತಿಯನ್ನು ಒಂದು ಒಳ್ಳೆಯ ಸದುದ್ದೇಶದಿಂದ ತಂದಿದ್ದೇವೆ ಎಂದು ಅವರು ಹೇಳಿದ್ದಾರೆ. ನಮ್ಮ ಕ್ಷೇತ್ರದಲ್ಲಿಯೂ ಸಹ ನಾವು ಅದನ್ನು ಇಂಪ್ಲಿಮೆಂಟ್ ಮಾಡಲು ಹೋದಾಗ, ಅನೇಕ ಜನರಿಗೆ ರಿಜಿಸ್ಟ್ರೇಶನ್ ಆಗುವುದೇ ಲೇಟ್ ಆಗಿ ಹೋಯಿತು. ಸ್ಕೆಚ್ ಕಾಪಿ ಬರಬೇಕು, ಅದು ಬರಬೇಕು, ಇದು ಬರಬೇಕೆಂದು ಹೇಳಿ ವಿಳಂಬವಾದುದಕ್ಕೆ ತುಂಬ ಜನರು ನಮ್ಮಲ್ಲಿಯೇ ಕೂಡ ಅಜಿಟೇಶನ್ ಮಾಡಿದರು. ನಾವುಗಳೂ ಸಹಿತ ಮಾನ್ಯ ಮಂತ್ರಿಗಳ ಹತ್ತಿರ ತಂದು ಈ ತರಹ ಮಾಡಿದರೆ ರಿಜಿಸ್ಟ್ರೇಶನ್ ನಮಗೆ ಲೇಟ್ ಆಗುತ್ತದೆ, ಜನರು ತುಂಬಾ ಗಲಾಟೆ ಮಾಡುತ್ತಾರೆ ನಮ್ಮ ಕ್ಷೇತ್ರದಲ್ಲಿ ಆಗುವುದಿಲ್ಲ, ನೀವು ರಿಜಿಸ್ಟ್ರೇಶನ್ ಆದಮೇಲೆ ಬೇಕಾದರೆ ಸರ್ವೆ ಮಾಡಿಸಿ ಎಂದು ಹೇಳಿ, ಒಂದು ಸಜೆಶನ್ ಕೊಟ್ಟಿದ್ದೇವೆ. ಈ ತರಹ ಮೊದಲೇ ಸ್ಕೆಚ್ ಮಾಡಿಸಿ ನಂತರ ರಿಜಿಸ್ಟ್ರೇಶನ್ ಹೋದರೆ ಆಗುವುದಿಲ್ಲ, ಹೀಗಾಗಿ ಜನರು ಕೂಡ ತುಂಬ ದುಂಬಾಲು ಬೀಳುವ ಹಾಗೆ ಆಗಿದೆ. ಅದೇ ತರಹ ಪಹಣಿ ಬದಲಾವಣೆಯಲ್ಲಿಯೂ ಇದೇ ತರಹ ಆಗಿದೆ. ಪಹಣಿ ಬದಲಾವಣೆ ಮಾಡಲು ಹೊರಟಿದ್ದಾರಲ್ಲಾ, ಕೆಲವರದ್ದೆಲ್ಲಾ ತಪ್ಪು ಪಹಣಿಗಳು ಕಂಪ್ಯೂಟರ್‌ಗೆ ಎಂಟ್ರಿಯಾಗಿ ಆ ಪಹಣಿಗಳನ್ನು ತಿದ್ದುಪಡಿ ಮಾಡಬೇಕಾದರೆ, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ಹೋಗಿ ನೋಡಿ ಕೊಡುವ ಹಾಗಿಲ್ಲ, ಇವರು ಹೋಗಿ ತಿಂಗಳುಗಟ್ಟಲೆ ಲೇಟ್ ಆಗುತ್ತಾ ಇದೆ. ಅದೂ

ಒಂದು ದೊಡ್ಡ ಗಲಾಟೆ ಬೀಳತಕ್ಕಂತಾಗಿದೆ. ಆದುದರಿಂದ ಇದನ್ನು ಸ್ವಲ್ಪ ನೋಡಿ ಮಾಡಿ ಜಾರಿಗೆ ತರುವುದೇ ವಿನಹ ಆದಷ್ಟು ಜಲ್ದಿ ಮಾಡತಕ್ಕಂತಾದ್ದು ಯೋಗ್ಯವಾದುದಲ್ಲ. ಸುಮ್ಮನೆ ಹೊಸ ಹೊಸವುಗಳನ್ನು ಮಾಡಲು ಹೋಗಬಾರದು.

ಅಧ್ಯಕ್ಷರು : ಮಂತ್ರಿಗಳು ಆ ಕುರಿತು ಚರ್ಚಿಸಲು ಸಭೆ ಕರೆಯುತ್ತೇವೆಂದು ಹೇಳಿದ್ದಾರಲ್ಲಾ?

ಶ್ರೀ ಜಗದೀಶ ಶೆಟ್ಟರ್ : ಈಗ ನಾವು ಡೈರೆಕ್ಟರಿ ಚೇಂಜ್ ಮಾಡಬೇಕಾದರೆ ಅದು ಆರಾರು ತಿಂಗಳು ಆದರೂ ಚೇಂಜ್ ಆಗುವುದಿಲ್ಲ. ಇದರಿಂದಾಗಿ ಬಹಳಷ್ಟು ಸಮಸ್ಯೆಗಳು ಉಂಟಾಗಿವೆ. ಆದುದರಿಂದ ಇದರ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಬೇಕಾಗಿದೆ.

ಶ್ರೀ ಕರಿಯಣ್ಣ : ಇದಕ್ಕೆಲ್ಲಾ ಕಾರಣ ಕಂಡುಹಿಡಿಯಬೇಕು. ಸುಮ್ಮನೆ ಇವೆಲ್ಲವನ್ನು ಹೊಸ ಹೊಸದೆಂದು ಮಾಡುವುದಕ್ಕೆ ಹೋಗಿ ವ್ಯತ್ಯಾಸ ಮಾಡಬಾರದು.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಸಭೆ ಕರೆಯುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀ ಡಿ.ಎ. ಸದಾನಂದ ಗೌಡ : ನನಗೆ ತಿಳಿದ ಹಾಗೆ, ಈ ಪ್ರೈವೇಟ್ ಸರ್ವೆಯರ್ಸ್ ಅಪಾಯಿಂಟ್‌ಮೆಂಟ್ ಬಗ್ಗೆ ಒಂದು ಕೇಸ್ ಹೈಕೋರ್ಟ್‌ನಲ್ಲಿದೆ. ಅದನ್ನು ನಮ್ಮ ಸರಕಾರದ ವತಿಯಿಂದ ಸರಕಾರಿ ವಕೀಲರು ಬಹಳ ಮುತುವರ್ಜಿ ವಹಿಸಿ ಸೂಕ್ತರೀತಿಯಲ್ಲಿ ಕೆಲಸವನ್ನು ಮಾಡುತ್ತಾ ಇಲ್ಲ ಎನ್ನುವಂತಾದ್ದು ಕೂಡ ನಮ್ಮ ಗಮನಕ್ಕೆ ಬಂದಿದೆ. ನೀವು ಯಾವುದೇ ಮಾತುಕತೆಗಳು, ಮತ್ತೊಂದನ್ನು ಮಾಡಬೇಕಾದರೆ, ಪ್ರಾರಂಭಿಕ ಹಂತದಲ್ಲಿ ಕೋರ್ಟಿನಲ್ಲಿರುವ ಈ ಕೇಸ್‌ನ್ನು ವಿಥ್‌ಡ್ರಾ ಮಾಡಬೇಕಾಗುತ್ತದೆ ಅಥವಾ ಫೈನಲೈಸ್ ಮಾಡಬೇಕಾಗುತ್ತದೆ. ತಾವು ಆ ಕೆಲಸಗಳನ್ನು ಶೀಘ್ರವಾಗಿ ಮಾಡಬೇಕು. ನಾನು ಈಗಾಗಲೇ ತಮ್ಮ ಇಲಾಖೆಗೆ ಪತ್ರಗಳನ್ನು ಬರೆದಿದ್ದೇನೆ. ಆದರೆ ಇಷ್ಟರತನಕ ಆ ಹೈಕೋರ್ಟ್ ಕೇಸಿನ ಬಗ್ಗೆ ಸರಕಾರದ ಪರವಾಗಿ ಯಾವುದೇ ನಿರ್ದಿಷ್ಟವಾದಂತಹ ವ್ಯವಹಾರಗಳನ್ನು ಮಾಡಲಿಲ್ಲವೆಂಬುದು ನಮ್ಮ ಗಮನಕ್ಕೆ ಬಂದಿದೆ. ತಾವುಗಳು ಅದನ್ನು ವೆರಿಫೈ ಮಾಡಿ. ತತ್‌ಕ್ಷಣ ನೀವು ಅದನ್ನು ಮಾಡುವುದಿದ್ದರೆ ಮಾತ್ರ ನೀವು ಆಗ ಮೀಟಿಂಗ್ ಕರೆಯಲು ಆಗುತ್ತದೆ. ಅದನ್ನು ಮಾಡದಿದ್ದರೆ ಕೋರ್ಟ್‌ನಲ್ಲಿ ನಿಮ್ಮ ವಾದವಿವಾದಗಳು ಪೆಂಡಿಂಗ್‌ನಲ್ಲಿರುವಂಥ ಸಂದರ್ಭದಲ್ಲಿ ಮತ್ತೆ ನೀವು ಮಾತುಕತೆಗಳನ್ನು ಹೇಗೆ ನಡೆಸಲು ಸಾಧ್ಯವಾಗುತ್ತದೆ? ಕೋರ್ಟ್‌ನಲ್ಲಿ ಬರುವಂಥ ಜಡ್ಜ್‌ಮೆಂಟ್‌ಗೂ ನಿಮ್ಮ ಮಾತುಕತೆಗಳಿಗೂ ವ್ಯತ್ಯಾಸಗಳಾದರೆ ಏನು ಕಾರಣಗಳಾಗುತ್ತವೆ? ಆ ಹಿನ್ನೆಲೆಯಲ್ಲಿ ತಾವು ಕೋರ್ಟ್‌ನಲ್ಲಿರುವಂಥ ಕೇಸ್ ಏನಿದೆಯೋ ಅದನ್ನು ಒಂದೋ ಮಾತುಕತೆಯಲ್ಲಿ ವಿಥ್‌ಡ್ರಾ ಮಾಡತಕ್ಕಂಥಾದ್ದು, ಅಥವಾ ಸರಕಾರದ ವತಿಯಿಂದ ಒಳ್ಳೆಯ ವಕೀಲರನ್ನು ನೇಮಕ ಮಾಡುವುದರ ಮೂಲಕ ಅದನ್ನು ಪರಿಹಾರ ಮಾಡಿ, ತತ್‌ಕ್ಷಣ ತಾವು ಮೀಟಿಂಗ್ ಕರೆದರೆ ಅದು ಅರ್ಥಪೂರ್ಣವಾಗುತ್ತದೆ. ಇಲ್ಲವಾದಲ್ಲಿ ಅರ್ಥಪೂರ್ಣ ಆಗುವುದಿಲ್ಲ ಎಂದು ಹೇಳಬಯಸುತ್ತೇನೆ.

ಅಧ್ಯಕ್ಷರು : ಶ್ರೀ ಕಂಠಯ್ಯನವರೇ, ಈ ಎಲ್ಲಾ ವಿಷಯಗಳನ್ನು ಪರಿಶೀಲಿಸುವುದಕ್ಕೋಸ್ಕರವಾಗಿ ಶೀಘ್ರವೇ ಒಂದು ಮೀಟಿಂಗ್‌ನ್ನು ಕರೆಯಿರಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಎಲ್ಲರನ್ನೂ ಕರೆದು ಒಂದು ಸಭೆ ಮಾಡಿ ಒಂದು ತೀರ್ಮಾನ ಮಾಡೋಣ.

ಅಧ್ಯಕ್ಷರು : ಮಾನ್ಯ ಶಿವಶಂಕರ ರೆಡ್ಡಿಯವರ ಪ್ರಶ್ನೆಗೆ ಇನ್ನೂ ಉತ್ತರ ಬಂದಿಲ್ಲ. ಅದನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ರಾಜ್ಯದಲ್ಲಿರುವ ಅರಣ್ಯ ಇಲಾಖೆಯ ಸಿಬ್ಬಂದಿಗಳನ್ನು ಅಮಾನತ್ತಿನಲ್ಲಿಟ್ಟಿರುವ ಬಗ್ಗೆ

351 (3097) : **ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ)** : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಜನ ಎಸಿಎಫ್, ಆರ್ಎಫ್ಓ ಮತ್ತು ಗಾರ್ಡ್ಗಳು ಇದ್ದಾರೆ;

ಆ) ಕಳೆದ 3 ವರ್ಷಗಳಲ್ಲಿ ಎಷ್ಟು ಜನ ಎಸಿಎಫ್, ಆರ್ಎಫ್ಓ ಮತ್ತು ಗಾರ್ಡ್ಗಳನ್ನು ಕರ್ತವ್ಯ ಲೋಪದ ಮೇಲೆ ಅಮಾನತ್ತುಗೊಳಿಸಲಾಗಿದೆ: (ವಿವರ ನೀಡುವುದು)?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು):

ಅ) ಎಸಿಎಫ್ 235

ಆರ್ಎಫ್ಓಗಳು 763

ಫಾರೆಸ್ಟ್ ಗಾರ್ಡ್ಗಳು 1811

ಆ)

ಹುದ್ದೆಗಳು	2000-01	2001-02	2002-03	ಒಟ್ಟು
ಎಸಿಎಫ್	01	02	01	04
ಆರ್ಎಫ್ಓ	08	06	08	22
ಫಾರೆಸ್ಟ್ ಗಾರ್ಡ್ಗಳು	24	23	26	73
ಒಟ್ಟು	33	31	35	99

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನಗೆ ಕೊಟ್ಟ ಉತ್ತರದಲ್ಲಿ 99 ಜನರನ್ನು ಅಮಾನತ್ತಿನಲ್ಲಿಟ್ಟಿದ್ದಾರೆಂದು ಹೇಳಿದ್ದಾರೆ. ಯಾರ್ಯಾರನ್ನು ಯಾವ ಯಾವ ಕಾರಣಗಳಿಗಾಗಿ ಅಮಾನತ್ತಿನಲ್ಲಿಟ್ಟಿದ್ದೀರಿ ಎಂಬುದನ್ನು ತಿಳಿಸಬೇಕು. ಆ ಮಾಹಿತಿಗಳನ್ನು ಕೊಟ್ಟಿಲ್ಲ. ದಯಮಾಡಿ ಆ ಮಾಹಿತಿಗಳನ್ನು ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಈಗ ಈ ಒಂದು ಅಧಿಕಾರಿಗಳ ಬಗ್ಗೆ ಬಿಗಿ ಹಿಡಿತವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಮಾನ್ಯ ಸಾಂಗ್ಲಿಯಾನರವರು ವೀರಪ್ಪನ್ ಬಗ್ಗೆ ನಿವೃತ್ತಿಯಾದ ನಂತರ ಒಂದು ಉತ್ತರ ಕೊಟ್ಟರು. ವೀರಪ್ಪನ್ನು ಹಿಡಿಯಲು ಸರಕಾರದಿಂದ ಸಾಧ್ಯವಿಲ್ಲವೆಂದು ಹೇಳಿದರು. ಹಾಗಾದರೆ ಸಾಂಗ್ಲಿಯಾನರಿಗೆ ಪೂರ್ಣ ವರದಿ ಗೊತ್ತೇ?

ಅಧ್ಯಕ್ಷರು : ವೀರಪ್ಪನ್ಗೂ ಇದಕ್ಕೂ ಯಾವ ಸಂಬಂಧ? ಎಲ್ಲಿಂದ ಎಲ್ಲಿಗೆ ಈ ಸಂಬಂಧ?

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ನನಗೆ ಹೇಳುವುದಕ್ಕೆ ಅವಕಾಶ ಮಾಡಿಕೊಡಿ. ಅಧಿಕಾರಿಗಳ ಬಗ್ಗೆ ಸರಕಾರಕ್ಕೆ ಹಿಡಿತ ಇದೆಯೋ ಇಲ್ಲವೋ ಎಂಬ ಬಗ್ಗೆ ನಮಗೆ ಅನುಮಾನ ಬಂದಿದೆ. ಕಾರಣ ಸಾಂಗ್ಲಿಯಾನ ನಿವೃತ್ತಿಯಾದರು. ಅವರು ನಿವೃತ್ತಿ ಆದಕೂಡಲೆ ವೀರಪ್ಪನ್ನು ಸರಕಾರದವರು ಹಿಡಿಯಲು ಆಗುವುದಿಲ್ಲವೆಂದು ಹೇಳಿದರು. ಹಾಗಾದರೆ ಸಾಂಗ್ಲಿಯಾನ ವೀರಪ್ಪನ್ ಜೊತೆಗೆ ಶಾಮೀಲಾಗಿದ್ದಾರೆಯೇ ಅಥವಾ ಸಾಂಗ್ಲಿಯಾನರಿಗೆ ವೀರಪ್ಪನ್ ಬಗ್ಗೆ ಮಾಹಿತಿ ಇದೆಯೇ ಎಂಬುದನ್ನು ಹೇಳಬೇಕು. ದಯಮಾಡಿ ಅದಕ್ಕೆ ಉತ್ತರವನ್ನು ಕೊಡಬೇಕು. ಹಾಗೆಯೇ 99 ಜನರನ್ನು